ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ:
https://kptcl.karnataka.gov.in

ಇ-ಮೇಲ್ ವಿಳಾಸ:
director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಸಂಖ್ಯೆ: ಕವಿಪ್ರನಿನಿ/ಬಿ66/35270/2022-23 ದಿನಾಂಕ: 13.05.2022

## ಸುತ್ತೋಲೆ

ವಿಷಯ: ಇಲಾಖಾ ಪರೀಕ್ಷೆಗಳು – ಸಹಾಯಕ ದರ್ಜೆ ಭಾಗ-ಎ ಮತ್ತು ಭಾಗ-ಬಿ, ಎಕ್ಸಿಕ್ಯೂಟೀವ್ ಹೈಯರ್ ಮತ್ತು ಲೋಯರ್ ಗಳಿಗೆ ಅರ್ಜಿಗಳನ್ನು ಅಹ್ವಾನಿಸುವ ಬಗ್ಗೆ.

**********

ಕವಿಪ್ರನಿನಿ ಇಲಾಖಾ ಪರೀಕ್ಷೆ ಸಹಾಯಕ ದರ್ಜೆ ಭಾಗ-ಎ ಮತ್ತು ಭಾಗ-ಬಿ, ಎಕ್ಸಿಕ್ಯೂಟೀವ್ ಹೈಯರ್ ಮತ್ತು ಲೋಯರ್ ಪರೀಕ್ಷೆಗಳನ್ನು ಜುಲೈ-2022 ರಲ್ಲಿ ನಡೆಸಲು ನಿರ್ಧರಿಸಿದ್ದು, ಈ ಕೆಳಕಂಡ ಷರತ್ತುಗಳು ಹಾಗು ನಿಯಮಗಳಿಗೆ ಒಳಪಟ್ಟು ಇಲಾಖಾ ಪರೀಕ್ಷೆಗೆ ಅರ್ಜಿ ಸಲ್ಲಿಸತಕ್ಕದ್ದು.

## I. ಷರತ್ತುಗಳು ಹಾಗೂ ಸಾಮಾನ್ಯ ಸೂಚನೆಗಳು:

1. ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ಸಹಾಯಕ ದರ್ಜೆ ಭಾಗ-ಎ ಮತ್ತು ಭಾಗ-ಬಿ, ಎಕ್ಸಿಕ್ಯೂಟೀವ್ ಹೈಯರ್ ಮತ್ತು ಲೋಯರ್ ಪರೀಕ್ಷೆಗಳಿಗೆ ಪ್ರತ್ಯೇಕವಾಗಿ ನಿಗಮದ/ವಿತರಣಾ ಕಂಪನಿಗಳ ಯಾವುದಾದರೂ ಕಛೇರಿಯಲ್ಲಿ ಪರೀಕ್ಷಾ ಶುಲ್ಕವನ್ನು ದಿನಾಂಕ: 16.05.2022 ರಿಂದ ದಿನಾಂಕ: 25.05.2022 ರ ಒಳಗೆ ಪಾವತಿಸತಕ್ಕದ್ದು. ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ ಹಾಗು ಅಜಾಗರೂಕತೆಯಿಂದ ಹೆಚ್ಚಾಗಿ ಕಟ್ಟಿರುವ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದಿಲ್ಲ.

| ಕ್ರ. ಸಂ. | ಪರೀಕ್ಷೆಯ ಹೆಸರು | ನಿಗದಿತ ಶುಲ್ಕ | ಅರ್ಜಿ ಸಲ್ಲಿಸಲು ಅರ್ಹ ನೌಕರರು |
|---|---|---|---|
| 1. | ಸಹಾಯಕ ದರ್ಜೆ ಭಾಗ-ಎ | ರೂ.300/- (ಪರೀಕ್ಷಾ ಶುಲ್ಕ) + ರೂ.54/- (18% ಸರಕು ಮತ್ತು ಸೇವಾ ತೆರಿಗೆ) = ಒಟ್ಟು ರೂ.354/- | ಕಿರಿಯ ಸಹಾಯಕರು/ ಬೆರಳಚ್ಚುಗಾರರು/ ಸಹಾಯಕರು/ ಕಿರಿಯ ಆಪ್ತ ಸಹಾಯಕರು. |
| 2. | ಸಹಾಯಕ ದರ್ಜೆ ಭಾಗ-ಬಿ | ರೂ.200/- (ಪರೀಕ್ಷಾ ಶುಲ್ಕ) + ರೂ.36/- (18% ಸರಕು ಮತ್ತು ಸೇವಾ ತೆರಿಗೆ) = ಒಟ್ಟು ರೂ.236/- | ಕಿರಿಯ ಸಹಾಯಕರು/ ಬೆರಳಚ್ಚುಗಾರರು/ ಸಹಾಯಕರು/ ಕಿರಿಯ ಆಪ್ತ ಸಹಾಯಕರು **(ಕಿರಿಯ ಸಹಾಯಕರು/ ಬೆರಳಚ್ಚುಗಾರರು ಸದರಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಕಡ್ಡಾಯವಾಗಿ ನಿಗಧಿತ ಪರೀಕ್ಷಾ ಶುಲ್ಕವನ್ನು ಪಾವತಿಸುವುದು)** |
| 3. | ಎಕ್ಸಿಕ್ಯೂಟೀವ್ ಹೈಯರ್ | ರೂ.300/- (ಪರೀಕ್ಷಾ ಶುಲ್ಕ) + ರೂ.54/- (18% ಸರಕು ಮತ್ತು ಸೇವಾ ತೆರಿಗೆ) = ಒಟ್ಟು ರೂ.354/- | ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಲ್ಲಿ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್/ಸಿವಿಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ಹೊಂದಿರುವ ಅಥವಾ ಎ.ಐ.ಸಿ.ಟಿ.ಇ ಯಿಂದ ಮನ್ನಣೆ ಪಡೆದ ಯಾವುದೇ ವಿಶ್ವವಿದ್ಯಾನಿಲಯ/ಸಂಸ್ಥೆಯಿಂದ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ /ಸಿವಿಲ್‌ನಲ್ಲಿ ಬಿ.ಇ ಅಥವಾ ಬಿ.ಟೆಕ್ ಅಥವಾ ಎ.ಎಂ.ಐ.ಇ(ಭಾರತ)(ಎ & ಬಿ) ಅಥವಾ ಪ್ರಸರಣ ಮತ್ತು ವಿತರಣೆಗೆ ಸಂಬಂಧಿಸಿದಂತೆ ಯಾವುದೇ ತತ್ಸಮಾನ ಇಂಜಿನಿಯರಿಂಗ್‌ನಲ್ಲಿ ಪದವಿ ಹೊಂದಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್/ ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರ್/ ಹಿರಿಯ ನಕಾಸೆಗಾರರು/ಉಗ್ರಾಣ ಪಾಲಕರು ದರ್ಜೆ-1 / ಉಗ್ರಾಣ ಪಾಲಕರು ದರ್ಜೆ-2. |

| | | | |
|---|---|---|---|
| 4. | ಎಕ್ಸಿಕ್ಯೂಟೀವ್ ಲೋಯರ್ | ರೂ.200/- (ಪರೀಕ್ಷಾ ಶುಲ್ಕ) + ರೂ.36/- (18% ಸರಕು ಮತ್ತು ಸೇವಾ ತೆರಿಗೆ) = ಒಟ್ಟು ರೂ.236/- | ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್‌ನಲ್ಲಿ ರೆಗ್ಯೂಲರ್ ಕಾಲೇಜ್ ಮೋಡ್ ನಲ್ಲಿ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಕಿರಿಯ ಇಂಜಿನಿಯರ್ ಹುದ್ದೆಗಿಂತ ಯಾವುದೇ ಪದವೃಂದದ ಕೆಳಮಟ್ಟದ ಹುದ್ದೆಯ ನೌಕರರು<br>ಉದಾ: ಕಾವಲುಗಾರ, ಮಾಲಿ ದರ್ಜೆ-2, ಕಿರಿಯ ಮಾಪಕ ಓದುಗ, ಕಿರಿಯ ಪವರ್ ಮ್ಯಾನ್, ಕಿರಿಯ ಸ್ಟೇಷನ್ ಪರಿಚಾರಕ, ದಫ್ತರಿ, ಕಿರಿಯ ಸಹಾಯಕ, ಸಹಾಯಕ ಇತ್ಯಾದಿ. **ಮತ್ತು**<br>ದಿನಾಂಕ 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ಪಡೆದಂತಹ ಅಭ್ಯರ್ಥಿಗಳನ್ನು ಮತ್ತು ಕವಿಪ್ರನಿನಿ/ ಎಸ್ಕಾಂಗಳ ಮೂಲಕ ನಿರಾಕ್ಷೇಪಣಾ ಪತ್ರವನ್ನು ಪಡೆದು, ಎ.ಐ.ಸಿ.ಟಿ.ಇ ಮತ್ತು ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಮೇಲ್ಕಂಡ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಡೆಯಲು ದಿನಾಂಕ: 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿಯೇ ಪ್ರವೇಶಾತಿ ಹೊಂದಿ ತದನಂತರದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು **ಮತ್ತು**<br>ಐ.ಟಿ.ಐ/ ಜೆ.ಓ.ಡಿ.ಸಿ / ನಕಾಶೆಗಾರಿಕೆಯ ವಿದ್ಯಾರ್ಹತೆ ಆಧಾರದ ಮೇಲೆ ನೇರವಾಗಿ ನಿರ್ವಾಹಕರು / ಮೇಲ್ವಿಚಾರಕರು / ಮಾಪಕ ಓದುಗರು / ನಕಾಶೆಗಾರರು/ಸಹಾಯಕ ನಕಾಶೆಗಾರರು/ ಟ್ರೇಸರ್‌ಗಳು / ಸಹಾಯಕ ಉಗ್ರಾಣ ಪಾಲಕರಾಗಿ ನೇಮಕಾತಿ ಹೊಂದಿದ್ದು, ತಾಂತ್ರಿಕ ಕೋಟಾದಡಿಯಲ್ಲಿ ಬರುವ ಅಭ್ಯರ್ಥಿಗಳು ಮತ್ತು ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆ ಮೇರೆಗೆ ನೇರನೇಮಕಾತಿ ಅಡಿಯಲ್ಲಿ ಸಹಾಯಕ ಪವರ್ ಮ್ಯಾನ್ / ಸ್ಟೇಷನ್ ಅಟೆಂಡೆಂಟ್ ದರ್ಜೆ-2 ಹುದ್ದೆಗೆ ನೇಮಕಾತಿಯಾಗಿ, ಪ್ರಸ್ತುತ ನಿರ್ವಾಹಕ / ಮಾಪಕ ಓದುಗ/ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು. |

1. **ದಿನಾಂಕ: 22.04.2015 ಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಡೆದು ದಿನಾಂಕ: 22.04.2015 ರ ನಂತರ ಸೇವೆಗೆ ಸೇರಿದ ನೌಕರರು ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.**
2. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ಪರಿಶೀಲಿಸಿ, ದೃಢೀಕರಿಸಿ ಸಂಬಂಧಪಟ್ಟ ಕಚೇರಿಯಿಂದ ಕ್ರೋಢೀಕರಿಸಿದ ಪತ್ರದೊಂದಿಗೆ ಈ ಕಚೇರಿಗೆ **ದಿನಾಂಕ: 04.06.2022 ರೊಳಗೆ ಸಲ್ಲಿಸ ತಕ್ಕದ್ದು.**
3. ಉದ್ಯೋಗಪೂರ್ವ ತರಬೇತಿಯನ್ನು **(pre-employment training)** ಪೂರ್ಣಗೊಳಿಸಿ ಉತ್ತೀರ್ಣರಾದಂತಹ ನೌಕರರಿಗೆ ಮಾತ್ರ ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ಇರುತ್ತದೆ. ನೇಮಕಾತಿಯಾದ ದಿನಾಂಕದಿಂದ ಒಂದು ವರ್ಷದ ಸೇವೆಯನ್ನು ಪೂರೈಸಿದ್ದರೂ ಉದ್ಯೋಗ ಪೂರ್ವ

ತರಬೇತಿಗೆ ಆಡಳಿತಾತ್ಮಕವತಿಯಿಂದ ನಿಯೋಜಿಸಲ್ಪಡದ ಅಧಿಕಾರಿ/ನೌಕರರಿಗೆ ಇಲಾಖಾ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ.

4. ಅಭ್ಯರ್ಥಿಗಳು ಒಮ್ಮೆಗೇ ಸಹಾಯಕ ದರ್ಜೆ ಭಾಗ-ಎ ಮತ್ತು ಸಹಾಯಕ ದರ್ಜೆ ಭಾಗ-ಬಿ ಎರಡೂ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಇಚ್ಛಿಸಿದಲ್ಲಿ, ಪ್ರತ್ಯೇಕ ಅರ್ಜಿಗಳನ್ನು ನಿಗದಿಪಡಿಸಿರುವ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು.

5. ಕಿರಿಯ ಸಹಾಯಕರು/ ಬೆರಳಚ್ಚುಗಾರರು ಸಹಾಯಕ ದರ್ಜೆ ಭಾಗ-ಬಿ ಪರೀಕ್ಷೆಯನ್ನು ತೆಗೆದುಕೊಳ್ಳುವುದು ಕಡ್ಡಾಯವಾಗಿರುವುದಿಲ್ಲ, ಒಂದು ವೇಳೆ ಸಹಾಯಕ ದರ್ಜೆ ಭಾಗ-ಬಿ ಪರೀಕ್ಷೆಯನ್ನು ತೆಗೆದುಕೊಳ್ಳಲು ಇಚ್ಛಿಸಿದಲ್ಲಿ ಅಭ್ಯರ್ಥಿಗಳಿಗೆ ಉಚಿತ ಅವಕಾಶ ಇಲ್ಲದಿರುವುದರಿಂದ ಸಹಾಯಕ ದರ್ಜೆ ಭಾಗ-ಬಿ ಪರೀಕ್ಷೆಗೆ ಪ್ರತ್ಯೇಕ ಅರ್ಜಿಯನ್ನು ನಿಗದಿಪಡಿಸಿರುವ ಪರೀಕ್ಷಾ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು.

6. **ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಹುದ್ದೆ ಮತ್ತು ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಮತ್ತು ದಿನಾಂಕ ಕಡ್ಡಾಯವಾಗಿ ಪರೀಕ್ಷಾ ಅರ್ಜಿಯಲ್ಲಿ ನಮೂದಿಸುವುದು.**

7. **ಎಕ್ಸಿಕ್ಯೂಟೀವ್ ಹೈಯರ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಹತೆ (ಬಿ.ಇ/ ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ) ವಿವರ ಕಡ್ಡಾಯವಾಗಿ ನಮೂದಿಸುವುದು. <u>ಬಿ.ಇ/ಡಿಪ್ಲೋಮಾ ವಿದ್ಯಾರ್ಹತೆ ಹೊಂದಿಲ್ಲದ ಅಭ್ಯರ್ಥಿಗಳು ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು.</u>**

8. ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಹತೆ (ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ / ಎರಡು ವರ್ಷದ ಐ.ಟಿ.ಐ/ಐ.ಟಿ.ಸಿ ಸರ್ಟಿಫಿಕೇಟ್ ಕೋರ್ಸ್ ಹೊಂದಿರುವ ತಾಂತ್ರಿಕ ಕೋಟಾದಡಿಯಲ್ಲಿ ನೇರ ನೇಮಕಾತಿ ಹೊಂದಿರುವ) ವಿವರ ಕಡ್ಡಾಯವಾಗಿ ನಮೂದಿಸುವುದು.

9. **ಸಹಾಯಕ ಹುದ್ದೆಯಲ್ಲಿ ಖಾಯಂಗೊಂಡಿರುವ ವಿಕಲಚೇತನ ಕಂದಾಯ ಸಹಾಯಕರುಗಳು ಸಹಾಯಕ ದರ್ಜೆ ಭಾಗ-ಎ ಮತ್ತು ಬಿ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ. ಕಿರಿಯ ಸಹಾಯಕ ದರ್ಜೆ-2 ಹುದ್ದೆಯಲ್ಲಿ ಖಾಯಂಗೊಂಡಿರುವ ವಿಕಲ ಚೇತನ ಕಂದಾಯ ಸಹಾಯಕರಿಗೆ ಪರೀಕ್ಷಾರ್ಥ ಅವಧಿ ಘೋಷಣೆ ಅಥವಾ ಕಿರಿಯ ಸಹಾಯಕ ಹುದ್ದೆಯ ಬಡ್ತಿಗೆ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅವಶ್ಯಕತೆ ಇಲ್ಲದಿರುವುದರಿಂದ ಕಿರಿಯ ಸಹಾಯಕ ದರ್ಜೆ-2 ರವರು ಇಲಾಖಾ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

## II. <u>ಅಭ್ಯರ್ಥಿಗಳಿಗೆ ಸೂಚನೆಗಳು:</u>

1. ಅಭ್ಯರ್ಥಿಗಳು ನಿಗದಿತ ಹೊಸ ನಮೂನೆಯ ಅರ್ಜಿಯನ್ನು ಕವಿಪ್ರನಿನಿಯ ವೆಬ್ ಸೈಟ್‌ನಿಂದ ಪಡೆದು (www.kptcl.com/eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ) ಪರಿಪೂರ್ಣವಾಗಿ ಭರ್ತಿ ಮಾಡಿ, ಸಹಿಯನ್ನು ದಾಖಲಿಸಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಹಾಗೂ ಪ್ರವೇಶಪತ್ರದ ಮೇಲೆ ಕಡ್ಡಾಯವಾಗಿ ಅಂಟಿಸಿ, ಸಂಬಂಧಪಟ್ಟ ಮುಖ್ಯಸ್ಥರ ಸಹಿ ಮತ್ತು ಕಚೇರಿ ಮುದ್ರೆಯೊಡನೆ ದೃಢೀಕರಿಸಿದ ಅರ್ಜಿಯನ್ನು, ವೇತನ ವಿತರಣಾಧಿಕಾರಿಗಳಿಗೆ **ದಿನಾಂಕ: 30.05.2022** ರ ಒಳಗೆ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

2. ಅರ್ಜಿಯ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡತಕ್ಕದ್ದು. ಉದಾ: ಹೆಸರು, ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಸೇರಿದಾಗ ಹೊಂದಿದ ಹುದ್ದೆ, ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ, ಪರೀಕ್ಷಾ ಐ.ಡಿ ಸಂಖ್ಯೆ, ವಿನಾಯಿತಿ ಹೊಂದಿರುವ ವಿವರ ಇತ್ಯಾದಿ.

3. ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ಸೇವಾಪುಸ್ತಕದಲ್ಲಿ ನಮೂದಿಸಿರುವಂತೆಯೇ ಬಿಡಿ ಅಕ್ಷರಗಳಲ್ಲಿ **(IN BLOCK LETTERS) ಕನ್ನಡದಲ್ಲಿ ಹಾಗೂ ಇಂಗ್ಲೀಷಿನಲ್ಲಿ ಭರ್ತಿ ಮಾಡುವುದು.**

4. ಇಲಾಖಾ ಪರೀಕ್ಷಾ ಮಂಡಳಿಯಿಂದ ನೀಡಲಾಗಿರುವ **ಐ.ಡಿ.ಸಂಖ್ಯೆಯನ್ನು (ID number as mentioned in marks cards issued)** ತಪ್ಪದೇ ನಮೂದಿಸುವುದು.

5. ಅಭ್ಯರ್ಥಿಯು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಥವಾ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿದ್ದಲ್ಲಿ, ಪೂರ್ಣ ವಿವರಗಳನ್ನು ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು.

6. ಅಭ್ಯರ್ಥಿಯು ಸಹಾಯಕ ದರ್ಜೆ ಭಾಗ-ಬಿ ಪತ್ರಿಕೆ-2 ಕ್ಕೆ ವಿನಾಯಿತಿ ಕೋರಿದಲ್ಲಿ ಬಿ.ಕಾಂ ಪದವಿಯಲ್ಲಿ ಡಬಲ್ ಎಂಟ್ರಿ ಬುಕ್ಕೀಪಿಂಗ್ **(Double Entry Book Keeping)** ಸಬ್‌ಜೆಕ್ಟ್ ಅನ್ನು ಒಂದು ವಿಷಯವಾಗಿ ಪಾಸ್ ಮಾಡಿದ / ಕಾಮರ್ಸ್ ವಿಷಯದಲ್ಲಿ ಪಿಯುಸಿ ಕೋರ್ಸ್ ಪೂರ್ಣಗೊಳಿಸಿದ ಪದವಿ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ಪ್ರತಿಗಳಿಗೆ ಕಛೇರಿ ಮುಖ್ಯಸ್ಥರಿಂದ ದೃಢೀಕರಣವನ್ನು ಪಡೆದು ಕಡ್ಡಾಯವಾಗಿ ಲಗತ್ತಿಸತಕ್ಕದ್ದು ಹಾಗೂ ಆ ಬಗ್ಗೆ ಪೂರ್ಣ ವಿವರಗಳನ್ನು ಅರ್ಜಿ ನಮೂನೆಯ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು. ಒಂದು ವೇಳೆ ಅರ್ಜಿ ಸಲ್ಲಿಸುವಾಗ ನಮೂದಿಸದೇ, ಮುಂದೇನಾದರೂ ವಿನಾಯಿತಿ ಬಗ್ಗೆ ಹಕ್ಕು ಪ್ರತಿಪಾದಿಸಿದಲ್ಲಿ, ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

7. ಬಿ.ಇ/ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ ಸಹಾಯಕ ಇಂಜಿನಿಯರ್‌ಗಳು/ಕಿರಿಯ ಇಂಜಿನಿಯರ್‌ಗಳು/ಉಗ್ರಾಣ ಪಾಲಕರು-ದರ್ಜೆ-1/ಉಗ್ರಾಣ ಪಾಲಕರು-ದರ್ಜೆ-2 ರವರು ಮಾತ್ರ ಎಕ್ಸಿಕ್ಯೂಟೀವ್ ಹೈಯರ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿದ್ದು, ಅರ್ಜಿಯಲ್ಲಿ ವಿದ್ಯಾರ್ಹತೆ (ಬಿ.ಇ/ಡಿಪ್ಲೋಮಾ) ವಿವರ ಕಡ್ಡಾಯವಾಗಿ ನಮೂದಿಸುವುದು ಹಾಗೂ ಬಿ.ಇ/ಡಿಪ್ಲೋಮಾ ಕೋರ್ಸ್‌ನ ಪದವಿ ಪ್ರಮಾಣ ಪತ್ರ ಪ್ರತಿಯನ್ನು ಕಛೇರಿ ಮುಖ್ಯಸ್ಥರಿಂದ ದೃಢೀಕರಣವನ್ನು ಪಡೆದು **ಕಡ್ಡಾಯವಾಗಿ** ಲಗತ್ತಿಸತಕ್ಕದ್ದು ಹಾಗೂ ಆ ಬಗ್ಗೆ ಪೂರ್ಣ ವಿವರಗಳನ್ನು ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು.

8. ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಎಲೆಕ್ಟ್ರಿಕಲ್/ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್/ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದ ನಿರ್ವಾಹಕರು/ ಮೇಲ್ವಿಚಾರಕರು/ಮಾಪಕ ಓದುಗರು/ನಕಾಶೆಗಾರರು/ಸಹಾಯಕ ನಕಾಶೆಗಾರರು/ಟ್ರೇಸರ್‌ಗಳು/ಸಹಾಯಕ ಉಗ್ರಾಣ ಪಾಲಕರು ಅಥವಾ ಐ.ಟಿ.ಐ/ ಜೆ.ಒ.ಡಿ.ಸಿ/ನಕಾಶೆಗಾರಿಕೆಯ ವಿದ್ಯಾರ್ಹತೆ ಆಧಾರದ ಮೇಲೆ ನೇರವಾಗಿ ನಿರ್ವಾಹಕರು/ ಮೇಲ್ವಿಚಾರಕರು/ ಮಾಪಕ ಓದುಗರು/ನಕಾಶೆಗಾರರು/ಸಹಾಯಕ ನಕಾಶೆಗಾರರು/ಟ್ರೇಸರ್‌ಗಳು/ಸಹಾಯಕ ಉಗ್ರಾಣ ಪಾಲಕರಾಗಿ ನೇಮಕಾತಿ ಹೊಂದಿದ್ದು, ತಾಂತ್ರಿಕ ಕೋಟಾದಡಿಯಲ್ಲಿ ಬರುವ ಅಭ್ಯರ್ಥಿಗಳು ಮಾತ್ರ ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿದ್ದು, ಅರ್ಜಿಯಲ್ಲಿ ವಿದ್ಯಾರ್ಹತೆ (ಬಿ.ಇ/ ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ/ತಾಂತ್ರಿಕ ಕೋಟದ ವಿವರ ಕಡ್ಡಾವಾಗಿ ನಮೂದಿಸುವುದು) ಹಾಗೂ ಬಿ.ಇ/ಡಿಪ್ಲೋಮಾ/ಎರಡು ವರ್ಷದ ಐ.ಟಿ.ಐ./ಐ.ಟಿ.ಸಿ ಸರ್ಟಿಫಿಕೇಟ್ ಕೋರ್ಸ್‌ನ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ಪ್ರತಿಗಳಿಗೆ ಕಛೇರಿ ಮುಖ್ಯಸ್ಥರಿಂದ ದೃಢೀಕರಣವನ್ನು ಪಡೆದು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

9. ಐ.ಟಿ.ಐ/ಐ.ಟಿ.ಸಿ ವಿದ್ಯಾರ್ಹತೆ ಮೇರೆಗೆ ನೇರನೇಮಕಾತಿ ಅಡಿಯಲ್ಲಿ ಸಹಾಯಕ ಪವರ್ ಮ್ಯಾನ್ / ಸ್ಟೇಷನ್ ಅಟೆಂಡೆಂಟ್ ದರ್ಜೆ-2 ಹುದ್ದೆಗೆ ನೇಮಕಾತಿಯಾಗಿ, ಪ್ರಸ್ತುತ ನಿರ್ವಾಹಕ / ಮಾಪಕ ಓದುಗ/ಓವರ್‌ಸೀಯರ್/ಸಹಾಯಕ ಉಗ್ರಾಣ ಪಾಲಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು.

10. ಎಕ್ಸಿಕ್ಯೂಟೀವ್ ಹೈಯರ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಮೇಲ್ಭಾಗದ ಶೀರ್ಷಿಕೆಯಲ್ಲಿ **ಎಕ್ಸಿಕ್ಯೂಟೀವ್ ಹೈಯರ್ (ವಿದ್ಯುತ್/ಸಿವಿಲ್) ಪರೀಕ್ಷೆಗಾಗಿ** ಎಂದು ನಮೂದಿಸಬೇಕು.

11. ಕೆಲವು ವಿಷಯಗಳಲ್ಲಿ ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳು ತಮ್ಮದೇ ಆದ ನಿಯಮಾವಳಿಗಳನ್ನು ರೂಪಿಸಿಕೊಂಡಿದ್ದರೂ, ಸದರಿ ಪರೀಕ್ಷೆಗೆ ಕವಿಪ್ರನಿನಿ ರೂಪಿಸಿರುವ ನಿಯಮಾವಳಿಗಳನ್ನೇ ಪರಿಗಣಿಸಲಾಗುವುದು.

12. ಪ್ರತಿ ಪತ್ರಿಕೆಯಲ್ಲೂ ಕನಿಷ್ಠ 35 ಅಂಕಗಳನ್ನು ಗಳಿಸಬೇಕು ಹಾಗೂ ಸರಾಸರಿ ಶೇಕಡ 40 ರಷ್ಟು ಅಂಕಗಳನ್ನು ಗಳಿಸಿದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವರು. ಯಾವುದೇ ಪತ್ರಿಕೆಯಲ್ಲಿ ಶೇಕಡಾ 40 ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದಲ್ಲಿ, ಅಭ್ಯರ್ಥಿಯು ಮುಂದಿನ ಪರೀಕ್ಷೆಯಲ್ಲಿ ಆ ಪತ್ರಿಕೆಗೆ ವಿನಾಯಿತಿಯನ್ನು ಪಡೆಯುತ್ತಾರೆ.

13. ಅಭ್ಯರ್ಥಿಯು ಅರ್ಜಿಯಲ್ಲಿ ಸುಳ್ಳು ಅಥವಾ ತಪ್ಪು ಮಾಹಿತಿ ಒದಗಿಸಿದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.

## III. ಅರ್ಜಿಗಳನ್ನು ದೃಢೀಕರಿಸುವ ಸಕ್ಷಮ ಪ್ರಾಧಿಕಾರಿಗಳಿಗೆ ಸೂಚನೆಗಳು:

1. **ಅಭ್ಯರ್ಥಿಗೆ ಸದರಿ ಪರೀಕ್ಷೆಯು ಅರ್ಹತಾ ಪರೀಕ್ಷಾರ್ಥ ಅವಧಿ ಪೂರ್ಣಗೊಳಿಸಲು/ಮುಂದಿನ ಪದೋನ್ನತಿ ಹೊಂದಲು ಅನಿವಾರ್ಯವುಳ್ಳವರಾಗಿರುವುದನ್ನು ದೃಢಪಡಿಸಿಕೊಳ್ಳುವುದು.**

2. **ದಿನಾಂಕ: 22.04.2015 ಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಷನ್), ಟೆಲಿಕಮ್ಯೂನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆಯನ್ನು ಪಡೆದು ದಿನಾಂಕ: 22.04.2015 ರ ನಂತರ ಸೇವೆಗೆ ಸೇರಿದ ನೌಕರರು ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಿರದ ಕಾರಣ, ಅಂತಹ ನೌಕರರು ಅರ್ಜಿಯನ್ನು ಸಲ್ಲಿಸಿದ್ದಲ್ಲಿ ತಿರಸ್ಕರಿಸುವುದು.**

3. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯನ್ನು ಸಂಬಂಧಪಟ್ಟ ಉಲೆನಿ/ಲೆಕ್ಕಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ ರವರು ಸೇವಾಪುಸ್ತಕದಲ್ಲಿ ನಮೂದಿಸಿದ ದಾಖಲೆಯೊಂದಿಗೆ ಪರಿಶೀಲಿಸಿ ಈ ಕೆಳಕಂಡ ವಿವರಗಳನ್ನು ದೃಢೀಕರಿಸುವುದು.

   - ಅಭ್ಯರ್ಥಿಯ ಹೆಸರು, ಕೆಲಸಕ್ಕೆ ಸೇರಿದ ದಿನಾಂಕ ಹಾಗೂ ಹುದ್ದೆ ಮತ್ತು ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಹಾಗೂ ಸದರಿ ಹುದ್ದೆಗೆ ವರದಿ ಮಾಡಿಕೊಂಡ ದಿನಾಂಕ.
   - ಅಭ್ಯರ್ಥಿಯು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಥವಾ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಪಡೆದಿರುವ ವಿವರ.
   - ಅಭ್ಯರ್ಥಿಯು ಸದರಿ ಪರೀಕ್ಷೆಗೆ ಮಾಡಿರುವ ಪ್ರಯತ್ನಗಳ ಸಂಖ್ಯೆ, ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ಪರೀಕ್ಷಾ ಶುಲ್ಕವನ್ನು ನಿಗಧಿತ ಅವಧಿಯಲ್ಲಿ ಪಾವತಿಸಿರುವ ಹಾಗೂ ಮೂಲ ರಶೀದಿಯನ್ನು ಅರ್ಜಿಯಲ್ಲಿ ನಿಗಧಿಪಡಿಸಿದ ಸ್ಥಳದಲ್ಲಿ ಅಂಟಿಸಿರುವ ಬಗ್ಗೆ.
   - ಅಭ್ಯರ್ಥಿಗಳು ಪ್ರವೇಶ ಪತ್ರದಲ್ಲಿನ ವಿವರಗಳನ್ನು ಪೂರ್ಣವಾಗಿ ಭರ್ತಿ ಮಾಡಿ, ಮಾದರಿ ರುಜುವನ್ನು ಕಛೇರಿಯ ಮುಖ್ಯಸ್ಥರಿಂದ ಸಹಿ ಮತ್ತು ಮುದ್ರೆಯೊಡನೆ ದೃಢೀಕರಿಸಿರುವ ಬಗ್ಗೆ.
   - ಅಭ್ಯರ್ಥಿಯು ಸಹಾಯಕ ದರ್ಜೆ ಭಾಗ-ಬಿ ಪತ್ರಿಕೆ-2 ಕ್ಕೆ ವಿನಾಯಿತಿ ಕೋರಿದಲ್ಲಿ ಬಿ.ಕಾಂ ಪದವಿಯಲ್ಲಿ ಡಬಲ್ ಎಂಟ್ರಿ ಬುಕ್ಕೀಪಿಂಗ್ ಸಬ್ಜೆಕ್ಟ್ ಅನ್ನು ಒಂದು ವಿಷಯವಾಗಿ ಪಾಸ್ ಮಾಡಿದ ಅಥವಾ ಕಾಮರ್ಸ್ ವಿಷಯದಲ್ಲಿ ಪಿಯುಸಿ ಕೋರ್ಸ್ ಪೂರ್ಣಗೊಳಿಸಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ಪ್ರತಿಗಳಿಗೆ ದೃಢೀಕರಣವನ್ನು ಪಡೆದು ಪ್ರತಿಗಳನ್ನು ಲಗತ್ತಿಸಿರುವ ಬಗ್ಗೆ.

- ಎಕ್ಸಿಕ್ಯೂಟೀವ್ ಹೈಯರ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಯ ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಹತೆ (ಬಿ.ಇ/ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ) ವಿವರಗಳನ್ನು ನಮೂದಿಸಿರುವುದನ್ನು ಹಾಗೂ ಕೋರ್ಸ್‌ನ ಪ್ರಮಾಣ ಪತ್ರವನ್ನು ದೃಢೀಕರಿಸಿ ಲಗತ್ತಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು ಹಾಗೂ ಬಿ.ಇ/ಡಿಪ್ಲೋಮಾ ಕೋರ್ಸ್ ವಿದ್ಯಾರ್ಹತೆ ಅರ್ಹತೆ ಹೊಂದಿಲ್ಲದ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು.
- ಎಕ್ಸಿಕ್ಯೂಟೀವ್ ಲೋಯರ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಯ ಪರೀಕ್ಷಾ ಅರ್ಜಿಯಲ್ಲಿ ವಿದ್ಯಾರ್ಹತೆ (ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ / ತಾಂತ್ರಿಕ ಕೋಟಾದಡಿಯಲ್ಲಿರುವ ಅಭ್ಯರ್ಥಿಗಳು ಎರಡು ವರ್ಷದ ಐ.ಟಿ.ಐ / ಐ.ಟಿ.ಸಿ. ಸರ್ಟಿಫಿಕೇಟ್ ಕೋರ್ಸ್) ವಿವರಗಳನ್ನು ನಮೂದಿಸಿರುವುದನ್ನು ಹಾಗೂ ಕೋರ್ಸ್‌ನ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ಪ್ರತಿಗಳನ್ನು ದೃಢೀಕರಿಸಿ ಲಗತ್ತಿಸಿರುವುದನ್ನು ಖಾತರಿ ಪಡಿಸಿಕೊಳ್ಳುವುದು ಹಾಗೂ ಕರ್ನಾಟಕ ರಾಜ್ಯದ ಪಾಲಿಟೆಕ್ನಿಕ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ವಿದ್ಯಾರ್ಹತೆ / ಎರಡು ವರ್ಷದ ಐ.ಟಿ.ಐ/ ಐ.ಟಿ.ಸಿ. ಸರ್ಟಿಫಿಕೇಟ್ ಕೋರ್ಸ್ ವಿದ್ಯಾರ್ಹತೆ ಅರ್ಹತೆ ಹೊಂದಿಲ್ಲದ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಕಳುಹಿಸಬಾರದು.
- ಅಭ್ಯರ್ಥಿಯು ಉದ್ಯೋಗಪೂರ್ವ ತರಬೇತಿಯನ್ನು ಪೂರ್ಣಗೊಳಿಸಿರುವ ಬಗ್ಗೆ.
- ಅರ್ಜಿ ನಮೂನೆಗೆ ಲಗತ್ತಿಸಿರುವ ಪ್ರವೇಶ ಪತ್ರದ ನಮೂನೆಯನ್ನು ಪರಿಶೀಲಿಸುವುದು.
- ಅಭ್ಯರ್ಥಿಗಳು ತಮ್ಮ ಇತ್ತೀಚೆಗಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯಲ್ಲಿ ಹಾಗೂ ಪ್ರವೇಶಪತ್ರದಲ್ಲಿ ಅಂಟಿಸಿರುವುದರ ಮತ್ತು ಸಂಬಂಧಪಟ್ಟ ಮುಖ್ಯಸ್ಥರ ಸಹಿ ಮತ್ತು ಕಚೇರಿ ಮುದ್ರೆಯೊಡನೆ ದೃಢೀಕರಿಸಿದ ಬಗ್ಗೆ.

4. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ದೃಢೀಕರಿಸಿದ ನಂತರ ನೋಂದಣಿ ಅಂಚೆಯ ಮೂಲಕ ಅಥವಾ ಖುದ್ದಾಗಿ **ದಿನಾಂಕ: 04.06.2022** ರೊಳಗಾಗಿ ಈ ಕೆಳಕಂಡ ನಮೂನೆಯಲ್ಲಿ ಕ್ರೋಢೀಕರಿಸಿದ ಪತ್ರದೊಂದಿಗೆ ಲಗತ್ತಿಸಿ **"ಸದಸ್ಯ ಕಾರ್ಯದರ್ಶಿ, ಇಲಾಖಾ ಪರೀಕ್ಷಾ ಮಂಡಳ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು"** ವಿಳಾಸಕ್ಕೆ ಸಲ್ಲಿಸುವುದು. ಗೊತ್ತುಪಡಿಸಿದ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು, ವಿಳಂಬವಾದಲ್ಲಿ ಸಂಬಂಧಿಸಿದ ವಿಭಾಗಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.

| ಕ್ರ. ಸಂ | ಅಭ್ಯರ್ಥಿಗಳ ಹೆಸರು | ಪದನಾಮ | ಕೆಲಸ ಮಾಡುತ್ತಿರುವ ಸ್ಥಳ | ತೆಗೆದುಕೊಳ್ಳುತ್ತಿರುವ ಪರೀಕ್ಷೆ | ಪ್ರಯತ್ನಗಳ ಸಂಖ್ಯೆ |
|---|---|---|---|---|---|
| | | | | | |
| | | | | | |

## <u>ಸಾರಾಂಶ</u>

| ಕ್ರ. ಸಂ | ಪರೀಕ್ಷೆಯ ಹೆಸರು | ಅರ್ಜಿಗಳ ಸಂಖ್ಯೆ |
|---|---|---|
| 1 | ಸಹಾಯಕ ದರ್ಜೆ-ಭಾಗ-ಎ | |
| 2 | ಸಹಾಯಕ ದರ್ಜೆ-ಭಾಗ-ಬಿ | |
| 3 | ಎಕ್ಸಿಕ್ಯೂಟೀವ್ ಹೈಯರ್ (ವಿದ್ಯುತ್) | |
| 4 | ಎಕ್ಸಿಕ್ಯೂಟೀವ್ ಹೈಯರ್ (ಸಿವಿಲ್) | |
| 5 | ಎಕ್ಸಿಕ್ಯೂಟೀವ್ ಲೋಯರ್ | |
| | ಒಟ್ಟು ಅರ್ಜಿಗಳ ಸಂಖ್ಯೆ | |

**<u>ವಿಶೇಷ ಸೂಚನೆ:</u>**

ಪ್ರಸರಣ ವಲಯ, ವೃತ್ತ ಹಾಗೂ ಎಲ್ಲಾ ವಿಭಾಗ / ಉಪ ವಿಭಾಗ ಕಛೇರಿಗಳ ಮುಖ್ಯಸ್ಥರು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಕಾರ್ಯ ಮತ್ತು ಪಾಲನಾ ಘಟಕ/ ಶಾಖಾ ಕಛೇರಿಗಳು / ಸ್ವೀಕರಣಾ ಕೇಂದ್ರಗಳು / ಎಂ.ಯು.ಎಸ್.ಎಸ್.ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಈ ಸುತ್ತೋಲೆಯ ಬಗ್ಗೆ ಮಾಹಿತಿ ನೀಡಿ ಮತ್ತು ತಮ್ಮ ಅಧೀನದಲ್ಲಿ ಬರುವ ಕಛೇರಿಗಳಿಗೆ ಈ ಸುತ್ತೋಲೆಯನ್ನು ತಲುಪಿಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು, ಅವರುಗಳ ಗಮನಕ್ಕೆ ತಂದಿರುವ ವಿಚಾರದಲ್ಲಿ ಕಛೇರಿಯ ದಾಖಲೆಗಳನ್ನು ಕಾಪಾಡುವುದು. ತಪ್ಪಿದಲ್ಲಿ ಮುಂದೇನಾದರೂ ತಕರಾರುಗಳು ಬಂದರೆ ಕಛೇರಿಯ ಮುಖ್ಯಸ್ಥರುಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ ಈ ಮೇಲೆ ತಿಳಿಸಿರುವ ಯಾವುದಾದರೂ ಷರತ್ತು/ಸೂಚನೆಗಳನ್ನು ಉಲ್ಲಂಘಿಸಿದ, ಅಪೂರ್ಣ ಹಾಗು ವಿಳಂಬವಾಗಿ ಬಂದ ಅರ್ಜಿಗಳನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.

**ಸದಸ್ಯ ಕಾರ್ಯದರ್ಶಿ,**
**ಇಲಾಖಾ ಪರೀಕ್ಷಾ ಮಂಡಳಿ, ಕವಿಪ್ರನಿನಿ**

**<u>ಪ್ರತಿಗಳು:</u>**

1. ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ ಪಿಸಿಕೆಎಲ್
2. ನಿರ್ದೇಶಕರು (ಹಣಕಾಸು), ಕವಿಪ್ರನಿನಿ, ಬೆಂಗಳೂರು
3. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂ
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ ಎಸ್ಕಾಂ
5. ಎಲ್ಲಾ ಮುಖ್ಯಇಂಜಿನಿಯರ್(ವಿ), ಕವಿಪ್ರನಿನಿ/ ಎಸ್ಕಾಂ
6. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.karnataka.gov.in ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

7. ಎಲ್ಲಾ ಅಧೀಕ್ಷಕಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
8. ಎಲ್ಲಾ ಕಾರ್ಯನಿರ್ವಾಹಕಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
9. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು (ಆಂ.ಪ.), ಕವಿಪ್ರನಿನಿ, ಎಸ್ಕಾಂ.
10. ಸದರಿ ಅಧಿಕಾರಿಗಳಿಗೆ

**<u>ಪ್ರತಿಗಳು ಮಾಹಿತಿಗಾಗಿ:</u>**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ, ಬೆಂಗಳೂರು & ನಿರ್ದೇಶಕರು ಕವಿಪ್ರನಿನಿ ಮತ್ತು ಎಸ್ಕಾಂ
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ & ನಿರ್ದೇಶಕರು ಕವಿಪ್ರನಿನಿ ಮತ್ತು ಎಸ್ಕಾಂ
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಘ, ಬೆಂಗಳೂರು
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ./ ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು